ಸ್ಥಾಪಿಸುವ ಬಗ್ಗೆ.

೧೮೫೫. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಭಾರತ ಸರ್ಕಾರದವರು ಮಂಗಳೂರಿನಲ್ಲಿ ತೈಲ ಶುದ್ಧೀಕರಣ ಕಾರ್ಖಾನೆ ಹಾಗೂ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪಿಸುವ ಪ್ರಸ್ತಾಪವನ್ನು ಕೈಬಿಟ್ಟಿದಾರೆಯೇ ?

ಆ) ಹಾಗಿದ್ದಲ್ಲಿ ಈ ವಿಶೆಯಲ್ಲಿ ಸರ್ಕಾರದ ವತಿಯಿಂದ ಈ ಕಾರ್ಖಾನೆಗಳನ್ನು ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ತೆಗೆದುಕೊಂಡ ಕ್ರಮಗಳು ಏನು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಗಳು).—

ಅ) ಈ ತರಹದ ಆದೇಶ ಭಾರತ ಸರ್ಕಾರದಿಂದ ಬಂದಿಲ್ಲ.

ಆ) (ಅ)ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಚೆಂಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ. ಲಿಖಿತ ಮೂಲಕ ಉತ್ತರಿಸಿದ ಪ್ರಶ್ನೆಗಳನ್ನು ಈ ಸದನದ ಮುಂದೆ ಇಡುತ್ತೇನೆ.

ಬೀದರ್‌ನಲ್ಲಿ ನಡೆದ ಸಾಹಿತ್ಯ ಸಮ್ಮೇಳನ

೨೬೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್(ಅಥಣಿ).—ಮಾನ್ಯ ವಾರ್ತಾ ಯುವಜನಸೇವೆ ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ೧೯೮೫ರಲ್ಲಿ ಬೀದರ್‌ನಲ್ಲಿ ನಡದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರ ಅನುದಾನ ನೀಡಿದೆಯೇ ? ಹಾಗಿದ್ದಲ್ಲಿ ಅದರ ಮೊತ್ತ ಎಷ್ಟು ? ಹಾಗೂ ಆ ಬಗ್ಗೆ ವಿಚ್ಚವಾದ ಮೊಬಲಗೆಷ್ಟು ?

ಆ) ಸಮ್ಮೇಳನ ಸಂಪೂರ್ಣವಾಗಿ ನಡೆಯದಿರುವ ಬಗ್ಗೆ ಸರ್ಕಾರದವರಿಗೆ ದೂರುಗಳು ಬಂದಿದೆಯೇ?

ಶ್ರೀ ಜೀವರಾಜ ಆಳ್ವ (ಯುವಜನಸೇವಾ ರಾಜ್ಯ ಸಚಿವರು).—

ಅ) ಅನುದಾನ ನೀಡಲಾಗಿದೆ. ಮೊತ್ತ ರೂ. ೩.೦೦ ಲಕ್ಷ ವೆಚ್ಚದ ಮೊಬಲಗಿನ ವಿವರಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಇನ್ನೂ ನೀಡಿಲ್ಲ.

ಆ) ಬಂದಿರುವುದಿಲ್ಲ.

ಯಕ್ಷಗಾನಕ್ಕೆ ಪ್ರೋತ್ಸಾಹ ಕೊಡುವುದು.

೨೮೩. ಶ್ರೀ ಪಟಮಕ್ಕಿ ರತ್ನಾಕರ (ತೀರ್ಥ ಹಳ್ಳಿ).—ಮಾನ್ಯ ವಾರ್ತಾ ಯುವಜನ ಸೇವೆ ಕ್ರೀಡೆ ಹಾಗೂ ಪ್ರಸೊದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಯಕ್ಷಗಾನದ ಉಳಿವು ಮತ್ತು ಬೆಳವಣಿಗೆಗೆ ಸರ್ಕಾರದವರು ಯಾವ ರೀತಿಯ ಪ್ರೋತ್ಸಾಹ ನೀಡುತ್ತಿದ್ದಾರೆ.

ಶ್ರೀ ಜೀವರಾಜ ಆಳ್ವ (ವಾರ್ತ ಪ್ರವಾಸೋದ್ಯಮ ಹಾಗೂ ಯುವಜನಸೇವಾ ರಾಜ್ಯ ಮಂತ್ರಿಯವರು).—